ಹುತಾತ್ಮರಾದ ವಿಯಟ್ನಾಮಿ ಮಹಿಳಾ ಗೆರಿಲ್ಲಾಗಳ ನೆನಪಿಗೆ ಕು ಚಿ ಸುರಂಗ ಪ್ರದೇಶದ ಬಳಿ ನಿರ್ಮಿಸಿರುವ ಸ್ಮಾರಕ




ಆದರೆ ವೈರಿ ಮಾಡಿಹೋದ ಮಾರಣಹೋಮ ಮತ್ತು ಸರ್ವನಾಶದಿಂದ ಹೊರಬರುವುದೂ ಅಷ್ಟೇ ಕಷ್ಟದ ಕೆಲಸ ಎಂದುಕೊಂಡೆ. ಅಮೆರಿಕದ ಜನರಲ್ ಆದ ವೆಸ್ಟ್ ಮೋರಲ್ಯಾಂಡ್ ವಿಯೆಟ್ನಾಮನ್ನು ಬಾಂಬುಗಳನ್ನು ಸುರಿಸಿ ಶಿಲಾಯುಗದ ಸ್ಥಿತಿಗೆ ತರುತ್ತೇವೆ ಎಂದು ಸೊಕ್ಕಿನಿಂದ ಅಬ್ಬರಿಸಿದ್ದರು. ನಿಜವಾದ ಶಿಲಾಯುಗವನ್ನು ನಾನು ಕು ಚಿ ಯಲ್ಲಿ ನೋಡಿದ್ದೆ' ಎಂದು ಮಧು ಭಾದುರಿ ಬರೆದಿದ್ದಾರೆ.

## ವಿಯೆಟ್ನಾಮ್ ಯುದ್ಧದ ಮುಖ್ಯ ನೆಲೆ

ಸೈಗಾನ್ ನಗರದಿಂದ 70 ಕಿ.ಮೀ. ದೂರದಲ್ಲಿದೆ ಕು ಚಿ ಸುರಂಗ. ಅಲ್ಲಿಗೆ ಹೋಗುವಾಗ, 1975ರಲ್ಲಿ ಅಮೆರಿಕನ್ನರು ಸುರಿದ ಬಾಂಬುಗಳಿಂದ ಈ ಪ್ರದೇಶ ಚಂದ್ರನ ಹೊರಮೈಯಿದ್ದಂತೆ ಇತ್ತು ಎಂದು ಮಧು ಭಾದುರಿ ಅವರು ಬರೆದಿದ್ದು ನೆನಪಾಯಿತು. ಈಗ ನೋಡಿದರೆ, ಅಕ್ಕಪಕ್ಕ ರಬ್ಬರ್ ತೋಟಗಳು, ಭತ್ತ, ಮೆಕ್ಕೆಜೋಳದ ಬೆಳೆಗಳು, ಹಸಿರು ಪರಿಸರ, ಸುಭಿಕ್ಷತೆ ಎದ್ದು ಕಾಣುತ್ತದೆ. ವಿಯಟ್ನಾಮ್ ಜನರ ಚುರುಕುತನ, ಜಿಗುಟುತನ, ಛಲ, ಹಟಮಾರಿತನ, ಗಟ್ಟಿತನ, ಫೀನಿಕ್ಸ್‌ನಂತೆ ಎದ್ದು ಬರುವ ಗುಣಗಳು ನಾಲ್ಕೇ ದಶಕದಲ್ಲಿ ಆದ ಈ ಬದಲಾವಣೆಗೆ ಕಾರಣವಾಗಿದೆ.

ಸುಮಾರು ಎರಡು ನೂರು ಕಿ.ಮೀ. ಉದ್ದದ ಈ ಸುರಂಗ ಮಾರ್ಗಗಳು ವಿಯಟ್ನಾಮ್ ಪಡೆಯ ನೆಲದಾಳದ ಯುದ್ಧದ ಕೇಂದ್ರ ಸ್ಥಾನವಾಗಿದ್ದವು. ಕೆಲವು ಕಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಸ್ತರಗಳಲ್ಲಿ ನೆಲದಡಿ ಹರಡಿಕೊಂಡಿದ್ದವು.

ಈಗ ಈ ಪ್ರದೇಶದಲ್ಲಿ ಯುದ್ಧ ಸ್ಮಾರಕ ಮತ್ತು ಪಗೋಡ ನಿರ್ಮಿಸಿದ್ದಾರೆ. ಯುದ್ಧದಲ್ಲಿ ಸತ್ತ ಐವತ್ತು ಸಾವಿರ ಮಂದಿ ಯೋಧರ ಹೆಸರುಗಳನ್ನಿಲ್ಲಿ ಕೆತ್ತಲಾಗಿದೆ. ಯುದ್ಧಕಾಲದ ಸುರಂಗಗಳನ್ನು ಪ್ರವಾಸಿಗರಿಗೆ ತೆರೆದಿಟ್ಟು, ಆಗಿನ ತಾಂತ್ರಿಕತೆ, ಆಧುನಿಕ ಶಸ್ತ್ರಾಸ್ತ್ರಗಳಿಲ್ಲದ ವಿಯಟ್ನಾಮ್ ಜನರು ಅಮೆರಿಕನ್ನರನ್ನು ಹೇಗೆಲ್ಲಾ ಸುರಂಗದಲ್ಲಿ ಸೇರಿಕೊಂಡೇ ಕಾಡಿದರು ಎಂಬುದನ್ನಿಲ್ಲಿ ಪ್ರದರ್ಶಿಸಿದ್ದಾರೆ.

ಕಾಡಿನ ನಡುವೆ ಮರದಡಿಯಲ್ಲಿ ತರಗೆಲೆಗಳ ಕೆಳಗೇ ಅಡಗಿರುವ ಸುರಂಗ ವ್ಯವಸ್ಥೆ ಅಚ್ಚರಿಗೊಳಿಸುತ್ತದೆ. ಸುರಂಗದ ಬಾಯಿ ಒಬ್ಬ ಸಣಕಲು ಮನುಷ್ಯ ಒಳಗೆ ಹೋಗುವಷ್ಟು ಮಾತ್ರ ಅಗಲವಿದೆ. ಕುಕ್ಕರಗಾಲಿನಲ್ಲಿ ಕುಳಿತು ಒಳಗೆ ಪುಟ್ಟಪುಟ್ಟ ಹೆಜ್ಜೆಯಿರಿಸಿಕೊಂಡು ಸಾಗಬೇಕು. ಇರುವೆ ಹುತ್ತದಂತಹ, ಜೇಡರಬಲೆಯಂತಹ ನೆಲದಡಿಯ ವ್ಯವಸ್ಥೆ ಸಂಕೀರ್ಣವಾದುದು. ಗಾಳಿ ಒಳಕ್ಕೆ ಬರಲು ಮತ್ತು ಹೊರಕ್ಕೆ ಹೋಗಲು ಕಿರುದಾರಿ, ಅಡುಗೆ ಕೋಣೆ, ಕೊಠಡಿಗಳು, ನೆಲದಡಿಯಲ್ಲಿಯೇ ಯುದ್ಧ ಸಾಮಗ್ರಿಗಳ ತಯಾರಿಕೆ, ಸೈನಿಕರ ಬಟ್ಟೆ, ಪಾದರಕ್ಷೆ ಕೂಡ ಅಲ್ಲಿಯೇ ಸಿದ್ಧವಾಗುತ್ತಿತ್ತು. ಅಡುಗೆ ಮಾಡುವಾಗ ಹೊರಟ ಹೊಗೆ ಹೋಗುವುದು ಹಲವಾರು ಮೀಟರ್ ದೂರದಲ್ಲಿ, ಅದೂ ರಾತ್ರಿ ಅಡುಗೆ ಮಾಡುತ್ತಿದ್ದುದರಿಂದ ಹೊಗೆ ಮಂಜಿನೊಂದಿಗೆ ಬೆರೆತುಹೋಗುತ್ತಿತ್ತು.

ವೈರಿಗಳನ್ನು ಇರುಕಿಸಲು, ಬಿದಿರನ್ನು ಚೂಪುಗೊಳಿಸಿ ತಯಾರಾದ ವಿವಿಧ ರೀತಿಯ ಟ್ರ್ಯಾಪ್‌ಗಳನ್ನು ನೋಡಬಹುದಾಗಿದೆ. ಅಮೆರಿಕನ್ ಯೋಧ ಸಾಯಬಾರದು, ಆದರೆ ಯುದ್ಧ ಮಾಡದ ಸ್ಥಿತಿ ತಲುಪಬೇಕು. ಅವನನ್ನು ನೋಡಿ ಇತರರು ಪ್ರಾಣಭೀತಿಗೆ ಒಳಗಾಗಬೇಕು. ಇದು ಅವರ ಕಾರ್ಯತಂತ್ರವಾಗಿತ್ತು. ಅಮೆರಿಕನ್ ಯೋಧರಂತೆ ಇವರು ತರಬೇತಿ ಹೊಂದಿದವರಲ್ಲ. ಆದರೆ ಇವರ ತಂತ್ರಗಾರಿಕೆಯನ್ನು ಕಂಡಾಗ ಎಂಥವರೂ ಬೆರಗಾಗುವರು. ವಾಸನೆ ಹಿಡಿಯಲು ಬಂದ ನಾಯಿಗಳಿಗೂ ದಾರಿ ತಪ್ಪುವ ಹಾಗೆ ಅಮೆರಿಕನ್ನರ ಬಟ್ಟೆಗಳನ್ನೇ ತಂದಿರಿಸಿಕೊಂಡಿರುತ್ತಿದ್ದರು. ವಿಷವಾಯುವನ್ನು ಅಕಸ್ಮಾತ್ ಅಮೆರಿಕನ್ನರು ಇವರ ದೊಂಗರಗಳಿಗೆ ಬಿಟ್ಟರೂ ಅದು ಒಳಗೆ ಹೋಗದ ಹಾಗೆ ಅವನ್ನು ರೂಪಿಸಿದ್ದರು.

ಹಲವಾರು ವರ್ಷಗಳವರೆಗೆ ಅಮೆರಿಕನ್ ಯೋಧರಿಗೆ ಈ ಸುರಂಗ ವ್ಯವಸ್ಥೆಯ ಬಗ್ಗೆ ತಿಳಿದಿರಲಿಲ್ಲ. ತಿಳಿದರೂ ಈ ಸಂಕೀರ್ಣ ವ್ಯವಸ್ಥೆಯನ್ನು ನಾಶ ಮಾಡಲು ಆಗದಂತಾಗಿತ್ತು.



ಅಮೆರಿಕ ಪಡೆಯನ್ನು ಇರುಕಿಸಲು, ಬಿದಿರನ್ನು ಚೂಪುಗೊಳಿಸಿ ತಯಾರಾಗುತ್ತಿರುವ ಟ್ರ್ಯಾಪ್



ಕಿರಿದಾದ ಕು ಚಿ ಸುರಂಗವನ್ನು ಪ್ರವೇಶಿಸುವ ಪ್ರಾತ್ಯಕ್ಷಿಕೆ